UASB LIBRARY
Newspaper Clippings
Pg .1 Monday 05-07-2021 Jai Kisan



ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೃಷಿ ಬೆಲೆ ಆಯೋಗದ ನಿರ್ಧಾರ

ಕೃಷಿ ಉತ್ಪನ್ನದಂತೆ ರೇಷ್ಮೆ ಗೂಡಿಗೂ ಬೆಂಬಲ ಬೆಲೆ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesgroup.com

ನಾನಾ ಕೃಷಿ ಉತ್ಪನ್ನಗಳಿಗೆ ಸರಕಾರ ನಿಗದಿಪಡಿಸುತ್ತಿರುವ ಮಾದರಿಯಲ್ಲೇ ರೇಷ್ಮೆ ಗೂಡಿಗೂ ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕೆಂದು ರೈತರು ಕೃಷಿ ಬೆಲೆ ಆಯೋಗಕ್ಕೆ ಮನವಿ ಸಲ್ಲಿಸಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಆಯೋಗ, ಈ ಸಂಬಂಧ ರೇಷ್ಮೆ ಇಲಾಖೆಯೊಂದಿಗೆ ಸಭೆ ನಡೆಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಿದೆ.

ರಾಗಿ, ಭತ್ತ, ತೊಗರಿ, ಜೋಳ ಸೇರಿದಂತೆ ನಾನಾ ಬೆಳೆಗಳಿಗೆ ಸರಕಾರ ಕನಿಷ್ಠ ಬೆಂಬಲ ಬೆಲೆ ನೀಡುತ್ತಿದೆ. ಅದೇ ರೀತಿ ರೇಷ್ಮೆ ಬೆಳೆಯನ್ನೂ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತಂದು ಕೆ.ಜಿ.ಗೆ ಕನಿಷ್ಠ 400-500 ರೂ. ನಿಗದಿಪಡಿಸಬೇಕು ಎಂಬುದು ರೇಷ್ಮೆ ಬೆಳೆಗಾರರ ಬೇಡಿಕೆ.

ರೇಷ್ಮೆ ಸಾಕಾಣಿಕೆ ಇಂದು ತುಂಬಾ ದುಬಾರಿಯಾಗಿದೆ. ಹಿಪ್ಪುನೇರಳೆ ಸೊಪ್ಪಿನ ಬೆಲೆಯೇ ಮೂಟೆಗೆ 300-350 ರೂ. ಇದೆ. ಕೂಲಿ ಕಾರ್ಮಿಕರ ಬರವಿದೆ. ಚಂದ್ರಿಕೆಗಳ ಬಾಡಿಗೆಯೂ ಏರಿದೆ. ಹೀಗಿದ್ದರೂ ರೇಷ್ಮೆ ಗೂಡಿನ ದರ ಮಾತ್ರ ಕೆಲವು ದಶಕಗಳಿಂದ 200-350 ರೂ. ಮಿತಿಯಲ್ಲಿರುತ್ತದೆ. ಕೆಲವೊಮ್ಮೆ 100 ರೂ.ಗೂ ಕುಸಿದ ಸಂದರ್ಭಗಳೂ ಇವೆ. ಹೀಗಾಗಿ, ಕೃಷಿಕರು ರೇಷ್ಮೆ ಬೆಳೆಯಿಂದ ವಿಮುಖರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರಕಾರವು ರೇಷ್ಮೆ ಗೂಡಿಗೂ ಬೆಂಬಲ ಬೆಲೆ ನಿಗದಿಪಡಿಸಬೇಕು ಎಂದು ರಾಜ್ಯ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರ ಸಂಘದ ಅಧ್ಯಕ್ಷ ಸಿ.ವಿ. ಲೋಕೇಶ್‌ಗೌಡ ಒತ್ತಾಯಿಸಿದ್ದಾರೆ. ಈ ಬಗ್ಗೆ ಕೃಷಿ ಬೆಲೆ ಆಯೋಗಕ್ಕೆ ಮನವಿ ಸಲ್ಲಿಸಿದ್ದಾರೆ. ಚೀನಾ ರೇಷ್ಮೆಗೆ ನೀಡುವ ಆದ್ಯತೆಯನ್ನು ಸ್ಥಳೀಯ ರೇಷ್ಮೆಗೆ ಏಕೆ ನೀಡಬಾರದು? ಎಂದು ಪ್ರಶ್ನಿಸಿದ್ದಾರೆ.

ಕೋವಿಡ್ ನಂತರ ಕಳೆದ ಒಂದೂವರೆ ವರ್ಷದಿಂದ ರಾಜ್ಯದ ರೇಷ್ಮೆ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಹೀಗಾಗಿ ಕನಿಷ್ಠ ಬೆಂಬಲ ಬೆಲೆ ನೀಡಬೇಕು ಎಂದು ಕರ್ನಾಟಕ ಪ್ರಾಂತ ಕೋಲಾರ ರೈತ ಸಂಘ ಮತ್ತು ಜಿಲ್ಲಾ ರೇಷ್ಮೆ ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.



ರೇಷ್ಮೆ ಗೂಡನ್ನು ಬೆಂಬಲ ಬೆಲೆಯಡಿ ತಂದು ನಮ್ಮ ಆಯೋಗದ ವ್ಯಾಪ್ತಿಗೆ ನೀಡಿದರೆ ನಮಗೆ ಖುಷಿಯ ವಿಚಾರ. ಚೀನಾ ರೇಷ್ಮೆಗಿಂತ ಕರ್ನಾಟಕದ ರೇಷ್ಮೆ ಅತ್ಯಂತ ಗುಣಮಟ್ಟವನ್ನು ಹೊಂದಿದೆ.
-ಹನುಮನಗೌಡ ಬೆಳಗುರ್ಕಿ ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ

ಒಂದು ರೂಪಾಯಿಗೆ 10 ಬರುವ ಪೆಪ್ಪರ್ ಮೆಂಟ್ ತಯಾರಿಸುವವನು ಅದರ ಬೆಲೆ ನಿಗದಿಪಡಿಸುವ ಕಾಲಘಟ್ಟದಲ್ಲಿ ಈ ದೇಶಕ್ಕೆ ಅನ್ನ ಕೊಡುವ ಅನ್ನದಾತ ತಾನು ಬೆಳೆಯುವ ಬೆಳೆಗೆ ಬೆಲೆ ನಿಗದಿಪಡಿಸಲಾರದೆ ನಷ್ಟ ಅನುಭವಿಸುತ್ತಿದ್ದಾನೆ. ರೇಷ್ಮೆ ಬೆಳೆಗಾರರಿಗೆ ಕಳೆದ ನಾಲ್ಕು ದಶಕಗಳ ನಂತರವೂ ಓಬಿರಾಯನ ಕಾಲದ ಬೆಲೆಯೇ ಇದೆ. ಇದನ್ನು ಸರಕಾರ ಸೂಕ್ಷ್ಮವಾಗಿ ಗಮನಿಸಿ ನ್ಯಾಯ ದೊರಕಿಸಿಕೊಡಬೇಕು.
- ಸಿ.ವಿ. ಲೋಕೇಶ್‌ಗೌಡ ಅಧ್ಯಕ್ಷರು, ರಾಜ್ಯ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರ ಸಂಘ

ಎಲ್ಲೆಲ್ಲಿ ರೇಷ್ಮೆ ಕೃಷಿಕರಿದ್ದಾರೆ?

ವಿಜಯಪುರ, ಶಿಡ್ಲಘಟ್ಟ, ರಾಮನಗರದಲ್ಲಿ ರೇಷ್ಮೆ ಗೂಡು ಮಾರುಕಟ್ಟೆಗಳಿವೆ. ಕೋಲಾರ, ಚಿಕ್ಕಬಳ್ಳಾಪುರ, ವಿಜಯಪುರ, ರಾಮನಗರ, ಶಿಡ್ಲಘಟ್ಟ ಸುತ್ತಮುತ್ತ ಸಹಸ್ರಾರು ರೇಷ್ಮೆ ಬೆಳೆಗಾರರಿದ್ದಾರೆ. ಈ ಭಾಗಗಳಲ್ಲಿ ಮನೆ ಮಂದಿಯೆಲ್ಲಾ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.

05-07-2021 Vk Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

ಆಹಾರದಲ್ಲಿ ಬ್ಲ್ಯಾಕ್ ಬ್ಯೂಟಿ ಸವಿರುಚಿಯ ಟ್ರೆಂಡ್

ನಿಸರ್ಗದತ್ತವಾಗಿ ಬರುವ ಕಪ್ಪು ಬಣ್ಣಗಳ ಆಹಾರ ಪದಾರ್ಥಗಳು ಇತ್ತೀಚೆಗೆ ಯುವಜನತೆಗೆ ಹೆಚ್ಚು ಆಪ್ತವಾಗುತ್ತಿವೆ. ಈ ಬಣ್ಣಹೊಂದಿದ ಹಣ್ಣು ತರಕಾರಿಗಳ ಬಳಕೆ ಕೂಡ ಹೆಚ್ಚುತ್ತಿದೆ.

ಶುಭಾ ವಿಕಾಸ್
shubha.hegde@timesgroup.com





ಬಣ್ಣಕ್ಕೊಂದು ಭಾವನೆ ಇದೆ. ರುಚಿ, ಸ್ವಾದವೂ ಇವೆ. ಬಣ್ಣವನ್ನು ನೋಡಿಯೇ ಸೇವಿಸಬೇಕು ಎಂದು ಅನಿಸುವ ಆಹಾರದಲ್ಲಿ ಇತ್ತೀಚೆಗೆ ಕಪ್ಪು ಗಮನ ಸೆಳೆಯುತ್ತಿದೆ. ಹೌದು, ಕಪ್ಪು ಬಣ್ಣದ ಆಹಾರ ಪದಾರ್ಥಗಳು ಖ್ಯಾತವಾಗುತ್ತಿದ್ದು ಕೆಲವು ವರ್ಷಗಳಿಂದ ಬ್ಲ್ಯಾಕ್ ಫುಡ್ ಇನ್‌ಸ್ಟಾಗ್ರಾಮ್ ಫುಡ್ ಟ್ರೆಂಡ್‌ನಲ್ಲಿ ಪ್ರಮುಖ ಸ್ಥಾನ ಉಳಿಸಿಕೊಂಡಿದೆ. ಇನ್ನಷ್ಟು ಹೊಸತುಗಳೊಂದಿಗೆ ಇದೀಗ ಮತ್ತಷ್ಟು ಆಕರ್ಷಕವಾಗಿದೆ. ಸಾಮಾಜಿಕ ತಾಣಗಳಲ್ಲಿ ಬ್ಲ್ಯಾಕ್ ಫುಡ್ ಚಾಲೆಂಜ್‌ಗಳು ನಡೆಯುತ್ತಿರುತ್ತವೆ. ಕೇವಲ ಕಪ್ಪು ಬಣ್ಣದ ಆಹಾರ ಸೇವಿಸುವ ಮೋಜಿನ ಚಾಲೆಂಜ್‌ಗಳಿರುವ ವಿಡಿಯೋಗಳು ಆಗಾಗ ಗಮನ ಸೆಳೆಯುತ್ತವೆ.



ಕಪ್ಪುಓಕೆ: ಆಹಾರದ ಬಣ್ಣವೇ ಸೇವನೆಗೆ ಪ್ರಚೋದನೆ ನೀಡುತ್ತದೆ. ಕಾಮನಬಿಲ್ಲಿನ ಬಣ್ಣಗಳಲ್ಲೇ ಹೆಚ್ಚು ಗುರುತಿಸಿಕೊಳ್ಳುತ್ತಿದ್ದ ಆಹಾರ ಪದಾರ್ಥಗಳು ಇದೀಗ ಕಪ್ಪು ಬಣ್ಣಕ್ಕೆ ತಿರುಗಿದ್ದರೂ ಈ ಬಣ್ಣವನ್ನು ಎಲ್ಲರೂ ಒಪ್ಪಿಕೊಂಡಿಲ್ಲ ಎನ್ನುತ್ತಾರೆ ಆಹಾರ ತಜ್ಞರು. ಆಹಾರವೂ ಸೇರಿದಂತೆ ಯಾವುದೇ ವಿಷಯದಲ್ಲಿ ಕಪ್ಪು ಎಂದರೆ ದೂರವೇ ಇಡುವ ಮನಸ್ಥಿತಿ ಸಂಪ್ರದಾಯ, ನಂಬಿಕೆಗಳೊಂದಿಗೆ ಮಿಳಿತವಾಗಿದ್ದರೂ ಸಾಮಾನ್ಯ ಆಹಾರಕ್ಕಿಂತ ಭಿನ್ನ ಬಣ್ಣ, ಸ್ವಾದಗಳಿಗೆ ಯುವಜನತೆ ಮರುಳಾಗಿದ್ದು ವಿಭಿನ್ನ ಪ್ರಯೋಗಕ್ಕೂ ಇದು ಸಹಕಾರಿ ಆಗಿದೆ. ಇಲ್ಲಿ ಬಣ್ಣದ ಬಗೆಗಿನ ಪ್ರೀತಿ, ಆಹಾರದ ರುಚಿ, ಆರೋಗ್ಯ ಕಾಳಜಿ ಕೂಡ ಇದೆ.



ರುಚಿಯ ಆಗರ: ಕಪ್ಪು ಅಕ್ಕಿ, ಕಪ್ಪು ಸೇಬು, ಬ್ಲ್ಯಾಕ್‌ಬೆರ್ರಿ, ಕಪ್ಪು ಹಸಿಮೆಣಸು, ಕಪ್ಪು ದ್ರಾಕ್ಷಿ, ಕಪ್ಪು ಬೆಳ್ಳುಳ್ಳಿ, ಕಪ್ಪು ಬೀನ್ಸ್, ಕಪ್ಪು ಟೊಮೇಟೊ, ಕಪ್ಪು ದಾಳಿಂಬೆ, ಕಡು ನೇರಳೆ ಬಣ್ಣದ ಬದನೆಕಾಯಿ, ಕ್ಯಾಬೇಜ್ ಸೇರಿದಂತೆ ಇನ್ನೂ ಹಲವು ತರಕಾರಿ, ಹಣ್ಣುಗಳು ಕಪ್ಪು ಆಹಾರದ ಪಟ್ಟಿಯಲ್ಲಿದ್ದು ಇವುಗಳಿಂದ ತಯಾರಿಸಿದ ಆಹಾರ, ಪಾನೀಯಗಳು ಅಷ್ಟೇ ರುಚಿಕರವಾಗಿರುತ್ತವೆ. ಈ ಲಿಸ್ಟ್‌ನಲ್ಲಿ ಕಪ್ಪು ಅಕ್ಕಿಯಿಂದ ತಯಾರಾದ ತಿನಿಸು, ಟೀ, ಕಾಫಿ, ಕೇಕ್, ಜ್ಯೂಸ್‌ಗಳು ಗಮನ ಸೆಳೆಯುತ್ತವೆ. ಬರ್ಗರ್, ನೂಡಲ್ಸ್, ಐಸ್‌ಕ್ರೀಮ್, ಪಾಸ್ತಾ, ಕೇಕ್‌ಗಳಲ್ಲಿ ಕಪ್ಪು ಸಿಂಗಾರಗೊಳ್ಳುತ್ತಿದೆ. ಸದ್ಯಕ್ಕೆ ಆಹಾರೋದ್ಯಮದಲ್ಲಿ ಕಪ್ಪು ಗಮನ ಸೆಳೆಯುತ್ತಿದ್ದು ನೈಸರ್ಗಿಕ ಕಪ್ಪು ತಳಿಯ ಆಹಾರ ಪದಾರ್ಥಗಳಿಗೂ ಬೇಡಿಕೆ ಸೃಷ್ಟಿಯಾಗಿದೆ ಎನ್ನುತ್ತಾರೆ ಪಾಕ ತಜ್ಞರು. ವಿದೇಶಗಳಲ್ಲಿ ಖ್ಯಾತವಾಗಿರುವ ಕೆಲವು ಕಪ್ಪು ಬಣ್ಣದ ಆಹಾರಶೈಲಿ ಈಗ ಸ್ಥಳೀಯವಾಗಿಯೂ ಗಮನ ಸೆಳೆಯುತ್ತಿದೆ.

ಆರೋಗ್ಯ ಕಾಳಜಿ: ಜೀವನಶೈಲಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳ ಪರಿಣಾಮ ಜನರಲ್ಲಿ ಈಗ ಆರೋಗ್ಯ ಕಾಳಜಿ ಹಿಂದೆಂದಿಗಿಂತ ಹೆಚ್ಚಿದೆ. ಹೀಗಾಗಿ ಆರೋಗ್ಯಕರ ಆಹಾರಗಳತ್ತ ಆವರು ಹೆಚ್ಚಿನ ಆಸಕ್ತಿ ತೋರುತ್ತಾರೆ. ಆದರಲ್ಲಿ ಕಪ್ಪು ಆಕ್ಕಿ ಅಗ್ರಪಂಕ್ತಿಯಲ್ಲಿದೆ. ಆದೇ ರೀತಿ ನೈಸರ್ಗಿಕವಾಗಿ ಕಪ್ಪು ಬಣ್ಣ ಹೊಂದಿರುವ ಹಣ್ಣು ತರಕಾರಿಗಳು ಆ್ಯಂಟಿಆಕ್ಸಿಡೆಂಟ್‌ಗಳನ್ನು ಒಳಗೊಂಡಿರುತ್ತವೆ. ಹಲವು ಬಗೆಯ ಪೋಷಕಾಂಶಗಳಿರುವ ಕಪ್ಪು ಬಣ್ಣದ ಹಣ್ಣು ತರಕಾರಿಗಳು ಕ್ಯಾನ್ಸರ್, ಮಧುಮೇಹ, ಹೃದಯ ಸಮಸ್ಯೆಯಂಥ ಗಂಭೀರ ರೋಗಗಳ ವಿರುದ್ಧ ಹೋರಾಡುತ್ತವೆ ಎನ್ನುತ್ತಾರೆ ಆರೋಗ್ಯ ತಜ್ಞರು. ಆದರೆ ಬಣ್ಣದ ಮೂಲಕ ಆಕರ್ಷಿಸುವ ಸಲುವಾಗಿ ಕೃತಕ ಬಣ್ಣ ಬಳಸಿದ ಆಹಾರ ಪದಾರ್ಥಗಳು ಅಪಾಯ ಉಂಟು ಮಾಡಬಹುದು. ಆದ್ದರಿಂದ ಸಾಧ್ಯವಾದಷ್ಟು ನೈಸರ್ಗಿಕವಾಗಿಯೇ ಕಪ್ಪು ಬಣ್ಣ ಹೊಂದಿದ ಪದಾರ್ಥಗಳನ್ನೇ ಸೇವಿಸಿ. ■

ಆಹಾರ ವಿಶೇಷ



ನೈಸರ್ಗಿಕವಾದ ಕಪ್ಪು ಆಹಾರಗಳಲ್ಲಿ ಕಪ್ಪು ಅಕ್ಕಿಯು ಪೋಷಕಾಂಶಗಳ ಆಗರ. ಅಡುಗೆಯಲ್ಲಿ ಇಂಥ ಆಹಾರಗಳ ಬಳಕೆ ಆರೋಗ್ಯಕ್ಕೆ ಉತ್ತಮ. ಆದರೆ ಅದು ಕೃತಕ ರಾಸಾಯನಿಕ ಅಂಶ ಬೆರೆಸಿದ ಆಹಾರವಾಗದಿರಲಿ.

- ಕೆ.ಸಿ. ರಘು । ಆಹಾರ ತಜ್ಞ



ಆಹಾರದಲ್ಲಿ ಕಪ್ಪು ಆಪರೂಪದ್ದಾದರೂ ಹೆಚ್ಚಿನ ಪ್ರಯೋಗಗಳು ನಡೆಯುತ್ತಿವೆ. ಕಪ್ಪು ಬಣ್ಣದ ಹಣ್ಣು ತರಕಾರಿಗಳ ಬಳಕೆ ಆಹಾರ ತಯಾರಿಕೆಯಲ್ಲಿ ಹೆಚ್ಚುತ್ತಿದ್ದು, ಈಗಾಗಲೇ ಗುರುತಿಸಿಕೊಂಡ ಬಣ್ಣದ ಹಣ್ಣು ತರಕಾರಿಗಳು ಕಪ್ಪು ತಳಿಗಳಲ್ಲಿ ಅಭಿವೃದ್ಧಿಗೊಳ್ಳುತ್ತಿವೆ.

- ನಾಗೇಶ್ । ಪಾಕ ತಜ್ಞ

ಕೋವಿಡ್‌ನಲ್ಲಿ ಮೃತಪಟ್ಟ ರೈತರ ಸಾಲ ಮನ್ನಾಕ್ಕೆ ಚಿಂತನೆ

■ **ವಿಕ ಸುದ್ದಿಲೋಕ** ಮೈಸೂರು

ಕೋವಿಡ್‌ನಿಂದಾಗಿ ಮೃತಪಟ್ಟ ರೈತರ ಮೇಲಿನ ಸಾಲದಲ್ಲಿ ತಲಾ ಒಂದು ಲಕ್ಷ ರೂ. ತನಕ ಮನ್ನಾ ಮಾಡಲು ಚಿಂತನೆ ನಡೆದಿದೆ ಎಂದು ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಹಾಗೂ ಮೈಸೂರು ಮತ್ತು ಚಾಮರಾಜ ನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು ''ಕೋವಿಡ್‌ನಿಂದಾಗಿ ಸಾಕಷ್ಟು ಮಂದಿ ತೊಂದರೆಗೀಡಾಗಿದ್ದಾರೆ. ರೈತರೂ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಕೋವಿಡ್‌ನಿಂದ ಸಾಕಷ್ಟು ರೈತರು ಮೃತಪಟ್ಟಿದ್ದಾರೆ. ಅವರ ಕುಟುಂಬ ಸಂಕಷ್ಟದಲ್ಲಿವೆ. ಈ ಹಿನ್ನೆಲೆಯಲ್ಲಿ ಕೋವಿಡ್‌ಗೆ ಬಲಿಯಾದ ರೈತರ ಮೇಲಿನ ಕೃಷಿ ಸಾಲದಲ್ಲಿ ಒಂದು ಲಕ್ಷ ರೂ. ತನಕ ಮನ್ನಾ ಮಾಡಲು ನಾವು ಅಪೆಕ್ಸ್ ಬ್ಯಾಂಕ್ ಸಭೆಯಲ್ಲಿ ಮನವಿ ಮಾಡಿದ್ದೇವೆ,'' ಎಂದು ಹೇಳಿದರು.

''ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಿಂದ ಕೃಷಿ ಸಾಲ ಪಡೆದವರಲ್ಲಿ ಕೋವಿಡ್‌ನಿಂದ 280 ರೈತರು ಬಲಿಯಾಗಿದ್ದಾರೆ. ಅವರಿಗೆ ತಲಾ ಒಂದು ಲಕ್ಷ ರೂ. ತನಕ ಸಾಲ ಮನ್ನಾ ಮಾಡಿದರೆ ಸುಮಾರು 2.10 ಕೋಟಿ ರೂ. ಬ್ಯಾಂಕ್‌ಗೆ ಹೊರೆಯಾಗಲಿದೆ. ಇದನ್ನು ನಮ್ಮ ಬ್ಯಾಂಕ್ ಭರಿಸಲು ಸಿದ್ಧವಿದೆ ಎಂದು ಅಪೆಕ್ಸ್ ಬ್ಯಾಂಕ್ ಸಭೆಯಲ್ಲಿ ತಿಳಿಸಿದ್ದೇನೆ. ಆದರೆ, ಇನ್ನುಳಿದ ಕೆಲವು ಡಿಸಿಸಿ ಬ್ಯಾಂಕ್‌ಗಳಲ್ಲಿ ಈ ಹೊರೆ 10ರಿಂದ 20 ಕೋಟಿ ರೂ. ತನಕ ಆಗಲಿದೆ. ಪರಿಣಾಮ, ಇದನ್ನು ಯಾರು ಭರಿಸಬೇಕು ಎನ್ನುವ ಕುರಿತು ಚರ್ಚೆ ನಡೆಯಲಿದೆ. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಬೆಳ್ಳಿ ಪ್ರಕಾಶ್ ಅವರು ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದ್ದಾರೆ,'' ಎಂದು ಹೇಳಿದರು.

''ಕೋವಿಡ್ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನಮ್ಮ ಬ್ಯಾಂಕ್ ರೈತರಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡಿದೆ. ಆಭರಣಗಳ ಮೇಲಿನ ಸಾಲದ ಬಡ್ಡಿಯನ್ನು ಶೇ. 11ರಿಂದ 9ಕ್ಕೆ ಇಳಿಸಿದ್ದೇವೆ. ಅದೇ ರೀತಿ ಈ ಹಿಂದಿನ ಸುಸ್ತಿ ಸಾಲದ ಬಡ್ಡಿಯನ್ನು ಶೇ. 14ರಿಂದ ಶೇ. 6ಕ್ಕೆ ಇಳಿಸಿದ್ದೇವೆ. ಇದರಿಂದ ಸಾಕಷ್ಟು ರೈತರಿಗೆ ಪ್ರಯೋಜನವಾಗಿದೆ. ಅವರಿಗೆ ಮತ್ತೆ ಹೊಸದಾಗಿ ಕೃಷಿ ಸಾಲ ನೀಡುತ್ತಿದ್ದೇವೆ,'' ಎಂದು ಹೇಳಿದರು.

ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ಎಂಸಿಡಿಸಿ ಬ್ಯಾಂಕ್ ಸಿಇಒ ಜಿ.ಸಿ.ಜನಾರ್ದನ್ ಗೋಷ್ಠಿಯಲ್ಲಿದ್ದರು.

05-07-2021 Vk Pg 13

05-07-2021 Vk Pg 02

ಫಸಲ್ ಭೀಮಾ ಯೋಜನೆ ಬೆಳೆವಿಮೆ ಮಾಡಿಸಲು ಮನವಿ

ಸಂ.ಕ.ಸಮಾಚಾರ ನೆಲಮಂಗಲ



ಪ್ರಸ್ತುತ ಸಾಲಿನ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕ ಮಹಾಂತೇಶ ಮುರಗೋಡ ತಿಳಿಸಿದ್ದಾರೆ.

ನೆಲಮಂಗಲ ತಾಲ್ಲೂಕಿನ ಕಸಬಾ ಹೋಬಳಿಯ ಟೊಮೋಟಾ ಬೆಳೆಯನ್ನು ಬೆಳೆ ವಿಮೆ ಯೋಜನೆಗೆ ಒಳಪಡಿಸಲಾಗಿದೆ ಎಂದ ಅವರು, ದೊಡ್ಡಬಳ್ಳಾಪುರ ತಾಲ್ಲೂಕಿನ ಕಸಬಾ ಮತ್ತು ತೂಬಗೆರೆ ಹೋಬಳಿ ಹಾಗ ಮತ್ತು ದೇವನಹಳ್ಳಿ ತಾಲ್ಲೂಕಿನ ಕುಂದಾಣ ಮತ್ತು ವಿಜಯಪುರ ಹೋಬಳಿ ಮತ್ತು ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ, ಜಡಿಗೇನಹಳ್ಳಿ ಮತ್ತು ನಂದಗುಡಿ ಹೋಬಳಿಯ ಟೊಮೋಟೊ ಬೆಳೆಯನ್ನು ವಿಮೆ ಯೋಜನೆಗೆ ಒಳಪಡಿಸಲಾಗಿದೆ. ಟೊಮೋಟೋ ಬೆಳೆಗಾರರು ವಿಮೆ ಮಾಡಿಸಲು ಬಯಸಿದ ರೈತರು ಕೂಡಲೇ ನಿಗದಿತ ಅರ್ಜಿಯೊಂದಿಗೆ ಆಯಾಯ ತಾಲ್ಲೂಕಿನ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನೋಂದಣಿ ಮಾಡಿಸುವಂತೆಯೂ ಅವರು ತಿಳಿಸಿದ್ದಾರೆ.ಟೊಮೋಟ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 1,18000ರೂ. ವಿಮೆಯ ಮೊತ್ತವಿದ್ದು ರೈತರು ಪಾವತಿಸಬೇಕಾದ ವಿಮಾ ಕಂತಿನ ದರ ಶೇ.5 ಅಂದರೆ 5.900ರೂ.ಗಳಾಗಿರುತ್ತದೆ. ವಿಮಾ ಕಂತು ನೋಂದಾಯಿಸಲು ಇದೇ ಜುಲೈ. 15ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾಯ ತಾಲ್ಲೂಕಿನ ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕರನ್ನು ಭೇಟಿ ಮಾಡುವಂತೆ ತಿಳಿಸಿದ್ದಾರೆ.

05-07-2021 Sk Pg 02

UASB LIBRARY

Newspaper Clippings

Pg .3 Jai Kisan Monday 05-07-2021

ರಾಜ್ಯದ ಅರಣ್ಯ ಒತ್ತುವರಿ ತಡೆಗೆ ಉಪಗ್ರಹದ ಬಲೆ

• ಶರತ್ ಭದ್ರಾವತಿ

- ಹೊಸ ತಂತ್ರಜ್ಞಾನದ ಮೊರೆ ಹೋದ ಅರಣ್ಯ ಇಲಾಖೆ
- ಕಾರ್ಯಾಚರಣೆ ಶುರುವಾಗಿದ್ದು ನೂರಾರು ಪ್ರಕರಣ ದಾಖಲು

ಶಿವಮೊಗ್ಗ: ಅರಣ್ಯ ಇಲಾಖೆಗೆ ಯಾವಾಗಲೂ ಕಗ್ಗಂಟಾಗಿರುವ ಅರಣ್ಯ ಒತ್ತುವರಿ ಸಮಸ್ಯೆಯಿಂದ ಮುಕ್ತಿ ಪಡೆಯಲು ಈಗ ತಂತ್ರಜ್ಞಾನದ ಮೊರೆ ಹೋಗಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಉಪಗ್ರಹದ ಸಹಾಯದಿಂದ ಅರಣ್ಯ ಭೂಮಿ ರಕ್ಷಣೆಗೆ ಇಲಾಖೆ ಮುಂದಾಗಿದೆ. ಇದರಿಂದ ಇನ್ಮುಂದೆ ಒಂದು ಅಡಿಯಷ್ಟೂ ಅರಣ್ಯ ಜಾಗ ಕಬಳಿಕೆ ಮಾಡುವುದು ಸುಲಭವಿಲ್ಲ.

ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಅರಣ್ಯಭೂಮಿ ಕಡಿಮೆಯಾಗುತ್ತಿದ್ದು, ಪ್ರಸ್ತುತ 41,590 ಚದರ ಕಿ.ಮೀ. ಅರಣ್ಯವಿದೆ. ರಾಜ್ಯದ ಭೂ ಪ್ರದೇಶದ ಶೇ.21.69 ರಷ್ಟು ಮಾತ್ರ ಅರಣ್ಯವಿದೆ. ಪಶ್ಚಿಮ ಘಟ್ಟವನ್ನೊಳಗೊಂಡ ಜಿಲ್ಲೆಗಳಲ್ಲಿ ಅರಣ್ಯ ಭೂಮಿ ಹೆಚ್ಚಾಗಿರುವುದು ಬಿಟ್ಟರೆ ಉಳಿದ ಜಿಲ್ಲೆಗಳಲ್ಲಿ ಅತಿ ಕಡಿಮೆ ಅರಣ್ಯವಿದೆ. ರಾಜ್ಯದಲ್ಲಿ ಒಟ್ಟು ಭೂಪ್ರದೇಶಕ್ಕಿಂತ ಅತಿ ಕಡಿಮೆ ಅರಣ್ಯ ಭೂಮಿ ಹೊಂದಿರುವ ಜಿಲ್ಲೆ ವಿಜಯಪುರವಾಗಿದ್ದು ಇಲ್ಲಿ ಶೇ.0.22 ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಉಡುಪಿ ಜಿಲ್ಲೆಯಲ್ಲಿ ಅತಿ ಹೆಚ್ಚು 122.51 ರಷ್ಟು ಅರಣ್ಯ ಪ್ರದೇಶವಿದೆ. ನಗರೀಕರಣ, ಬಗರ್‌ಹುಕುಂ, ವಿವಿಧ ಅಭಿವೃದ್ಧಿ ಕಾಮಗಾರಿ ಹೆಸರಿನಲ್ಲಿ ಅರಣ್ಯ ಭೂಮಿ ಪ್ರತಿ ವರ್ಷ ನಾಶವಾಗುತ್ತಲೇ ಇದೆ. ಇದರೊಂದಿಗೆ ಒತ್ತುವರಿ ಸಮಸ್ಯೆ ಅರಣ್ಯದ ಬುಡವನ್ನೇ ಅಲುಗಾಡಿಸುತ್ತಿದೆ.

2020ರ ವರದಿ ಪ್ರಕಾರ ಶಿವಮೊಗ್ಗ ಜಿಲ್ಲೆಯಲ್ಲಿ 49.22 ಚದರ ಕಿ.ಮೀ., ಹಾವೇರಿ 17.75 ಚ.ಕಿ.ಮೀ., ಧಾರವಾಡ 7.58, ಗದಗ 1.30, ಬಾಗಲಕೋಟೆ ಜಿಲ್ಲೆಯಲ್ಲಿ 0.03 ಚದರ ಕಿ.ಮೀ. ಅರಣ್ಯ ಪ್ರದೇಶ ಕಡಿಮೆಯಾಗಿದೆ. ಇದು ಇತ್ತೀಚಿನ ವರ್ಷಗಳಲ್ಲಿನ ಅರಣ್ಯ ನಾಶವಾದರೆ 50 ವರ್ಷದಿಂದ ಈಚೆಗೆ ಬಗರ್‌ಹುಕುಂ, ಒತ್ತುವರಿ ಹೆಸರಿನಲ್ಲಿ ಲಕ್ಷಾಂತರ ಹೆಕ್ಟೇರ್ ಅರಣ್ಯ ನಾಶವಾಗಿದೆ. ಇದಕ್ಕೆಲ್ಲ ಕಡಿವಾಣ ಹಾಕಲು ಅರಣ್ಯ ಇಲಾಖೆ ಈಗ ಉಪಗ್ರಹದ ಮೊರೆ ಹೋಗಿದೆ. ▸ 7ನೇ ಪುಟಕ್ಕೆ



ಶಿವಮೊಗ್ಗ: ಉಪಗ್ರಹ ಆಧಾರಿತ ಅರಣ್ಯದ ಸಾಂದರ್ಭಿಕ ಚಿತ್ರ.

ಆರು ತಿಂಗಳಿನಿಂದ ಉಪಗ್ರಹ ಆಧಾರಿತ ಅರಣ್ಯ ಒತ್ತುವರಿ ತಡೆ ಯೋಜನೆ ಪ್ರಾಯೋಗಿಕವಾಗಿ ನಡೆಯುತ್ತಿದ್ದು ಉತ್ತಮ ಫಲಿತಾಂಶ ದೊರೆಯುತ್ತಿದೆ. ಮುಂದಿನ ದಿನದಲ್ಲಿ ಅಧಿಕೃತವಾಗಿ ಇದನ್ನು ಲಾಂಚ್ ಮಾಡಲಾಗುವುದು.

• ಬಿಶ್ವಜೀತ್ ಮಿಶ್ರಾ, ಸಿಸಿಎಫ್, ಐಸಿಟಿ ವಿಭಾಗ, ಅರಣ್ಯ ಭವನ

05-07-2021 Uv Pg 01

05-07-2021 Vsv Pg 11

ಮಾರುಕಟ್ಟೆಯಲ್ಲಿ ಹೆಚ್ಚು ಆವಕವಿಲ್ಲದ್ದರಿಂದ ಕೆ.ಜಿ.ಗೆ 180ರಿಂದ 200 ರು.ಗೆ ಮಾರಾಟ

ಮಧುಮೇಹ, ರಕ್ತದೊತ್ತಡಕ್ಕೆ ನೇರಳೆ ರಾಮಬಾಣ

ಸ್ನ ನಾರಾಯಣಸ್ವಾಮಿ ನಂದಗುಡಿ

ಮಧುಮೇಹ, ಹೃದಯ ಸಂಬಂಧಿ ಕಾಯಿಲೆ, ಮೂತ್ರಕೋಶ ಸಂಬಂಧಿ ಕಾಯಿಲೆ, ಮಾನಸಿಕ ಹಾಗೂ ರಕ್ತದ ಒತ್ತಡದಂತಹ ರೋಗಗಳಿಗೆ ರಾಮಬಾಣವಾಗಿರುವ ಜಂಬು ನೇರಳೆ ಹಣ್ಣಿನ ಮಾರಾಟ ಭರ್ಜರಿಯಾಗಿ ಸಾಗಿದೆ.

ನಗರದ ಮಾರುಕಟ್ಟೆಗಳಲ್ಲಿ ಕಣ್ಣು ಹಾಯಿಸಿದಲ್ಲೆಲ್ಲ ನೇರಳೆ ಹಣ್ಣಿನ ಮಾರಾಟಕ್ಕಾಗಿ ನಿಲ್ಲಿಸಿರುವ ತಳ್ಳುಗಾಡಿಗಳು ಕಾಣಿಸಿಕೊಳ್ಳುತ್ತವೆ. ಮಳೆಗಾಲದ ಆರಂಭದಲ್ಲಿ ಲಭ್ಯವಿರುವ ನೇರಳೆ ಹಣ್ಣಿನ ಔಷಧ ಗುಣಗಳ ಬಗ್ಗೆ ತಿಳಿದಿರುವ ಜನರು, ಹಣ್ಣು ಖರೀದಿಗೆ ಮುಗಿಬೀಳುತ್ತಿದ್ದಾರೆ.

ಕೇಜಿಗೆ 180ರಿಂದ 200 ರು.: ಜಂಬೂ ನೇರಳೆ ಮಾರುಕಟ್ಟೆಗೆ ಎಷ್ಟು ಅಗತ್ಯವಿದೆಯೋ ಅಷ್ಟೇ ಆವಕವಾಗಿದ್ದು, ಉತ್ತಮ ಬೆಲೆ ದೊರೆಯುತ್ತಿದೆ. ಕೇಜಿಗೆ 180ರಿಂದ 200 ರು.ಗಳವರೆಗೆ ದೊರೆಯುತ್ತಿದ್ದು, ಉತ್ತಮ ವ್ಯಾಪಾರವಾಗುತ್ತಿದೆ ಎಂದು ತಳ್ಳುಗಾಡಿ ವ್ಯಾಪಾರಿಯೊಬ್ಬರು ತಿಳಿಸಿದರು. ಸದ್ಯ ಲಾಕ್‌ಡೌನ್ ಇದ್ದರೂ ಉತ್ತಮ ವ್ಯಾಪಾರವಾಗುತ್ತಿದೆ. ಜತೆಗೆ ರೈತರಿಗೂ ಲಾಭ ತಂದಿದೆ.

ಔಷಧೀಯ ಗುಣ: ನೇರಳೆ ಹಣ್ಣಿನಲ್ಲಿ ಯಥೇಚ್ಛವಾಗಿ ಔಷಧೀಯ ಗುಣವಿರುವುದೇ ಹಣ್ಣಿನ ಬೇಡಿಕೆಗೆ ಕಾರಣವಾಗಿದೆ. ಈ ಮಾತನ್ನು ವೈದ್ಯರೇ ಹೇಳುತ್ತಾರೆ. ಮಧುಮೇಹ, ಮೂತ್ರಕೋಶದ ತೊಂದರೆ, ಮಾನಸಿಕ ಹಾಗೂ ದೈಹಿಕ ಒತ್ತಡ, ರಕ್ತದೊತ್ತಡಗಳ ನಿಯಂತ್ರಣ ಹಾಗೂ ನಿವಾರಣೆಗೆ ಈ ಹಣ್ಣು ಅತ್ಯುತ್ತಮವಾಗಿದೆ. ಹೀಗಾಗಿ ಇಂತಹ ರೋಗಗಳಿಂದ ಬಳಲುತ್ತಿರುವವರು ಹೆಚ್ಚು ಹಣ್ಣನ್ನು ಖರೀದಿಸುತ್ತಾರೆ.

ಬದು, ಒಡ್ಡುಗಳಲ್ಲಿ ಬೆಳೆಯುವ ಮರ: ಜಂಬು ನೇರಳೆ ಹಣ್ಣನ್ನು ವಿಶೇಷವಾಗಿ ತೋಟ ಮಾಡಿ, ಕಾಳಜಿ ವಹಿಸಿ ಬೆಳೆಯಬೇಕಾಗಿಲ್ಲ. ರೈತರು ತಮ್ಮ ಹೊಲ ಗದ್ದೆಗಳ ಬದು ಹಾಗೂ ಒಡ್ಡುಗಳಲ್ಲಿ ಗಿಡನೆಟ್ಟರೆ ಸಾಕು, ತಾವೇ ಗಾಳಿ ಮಳೆ, ಬಿಸಿಲನ್ನು ಬಳಸಿಕೊಂಡು ಬೆಳೆಯುತ್ತವೆ. ಆದರೆ ದನಕರುಗಳಿಂದ ರಕ್ಷಣೆಯಾಗಬೇಕು. ವರ್ಷದಲ್ಲಿ ಒಂದು ಬಾರಿ ಮತ್ತು ಎರಡು ಬಾರಿ ಹಣ್ಣುಗಳನ್ನು ಬಿಡುವ ಮರಗಳಿವೆ. ಇದು ರೈತರಿಗೆ ಹೆಚ್ಚುವರಿ ಆದಾಯವನ್ನು ತಂದುಕೊಡುವ ಹಣ್ಣಾಗಿದೆ.



ಜಂಬೂ ನೇರಳೆ ಸೇವಿಸುವುದರಿಂದ ಮಧುಮೇಹ ನಿಯಂತ್ರಣಕ್ಕೆ ಬರುತ್ತದೆ. ಹೃದಯ ಸಂಬಂಧಿ, ರಕ್ತದೊತ್ತಡ ಹಾಗೂ ಇನ್ನಿತರೆ ಕಾಯಿಲೆಗಳಿಗೂ ಸಹಕಾರಿಯಾಗಿದೆ. ಮೂತ್ರಕೋಶದ ತೊಂದರೆಗೆ ಉಪಯುಕ್ತವಾಗಿದೆ.

–ಡಾ.ಸರಸ್ವತಿ, ತಾಲೂಕು ವೈದ್ಯಾಧಿಕಾರಿ